**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:6**

**ಸ್ಪೆಷಲ್ ಕೇಸ್ ಸಂಖ್ಯೆ: 510/23 ಸಿಡಬ್ಲ್ಯೂ:23**

| | |
|---|---|
| **ಸಾಕ್ಷಿದಾರರ ಹೆಸರು** | : ಡಾ: ಸನ್ಮಾನ್ ಶೆಟ್ಟಿ |
| **ತಂದೆ ಹೆಸರು** | : ಶ್ರೀಧರ ಶೆಟ್ಟಿ |
| **ವಯಸ್ಸು** | : **51** |
| **ವೃತ್ತಿ** | : ತುರ್ತು ಚಿಕಿತ್ಸಾ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ ಕುಂದಾಪುರ |
| **ವಾಸ** | : ಕುಂದಾಪುರ |

**<u>ದಿನಾಂಕ: 28-04-2026</u> ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆ</u> : ಸರ್ಕಾರಿ ಅಭಿಯೋಜಕರಿಂದ**

ನಾನು ಕಳೆದ ಮೂರು ವರ್ಷದಿಂದ ಕುಂದಾಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿನಾಂಕ:**20-09-2023** ರಂದು ರಾತ್ರಿ **11.26** ಗಂಟೆಗೆ ಸುರೇಶ್ ಎಂಬ ಗಾಯಾಳು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ಅದೇ ದಿನ ರಾತ್ರಿ **8.30** ಗಂಟೆ ಸಮಯಕ್ಕೆ ಗುಡ್ಡೆಯಂಗಡಿಯ ಚಂದ್ರಿಕಾ ಬಾರ್ ಬಳಿ ಆರು ಜನ ವ್ಯಕ್ತಿಗಳು ದೊಣ್ಣೆ ಮತ್ತು ಕತ್ತಿಯಿಂದ ಹಲ್ಲೆ ಮಾಡಿರುವುದಾಗಿ ಹಲ್ಲೆಯ ಇತಿಹಾಸವನ್ನು ತಿಳಿಸಿರುತ್ತಾರೆ. ಸದ್ರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಆತನ ದೇಹದ ಮೇಲೆ ಈ ಕೆಳಕಂಡ ಗಾಯಗಳು ಕಂಡು ಬಂದವು.

1) ಎಡ ಕಣ್ಣಿನ ಬದಿಯಲ್ಲಿ ಜಜ್ಜಿದ ಗಾಯ ಕಂಡು ಬಂತು.

2) ಮೂಗಿಯ ತುದಿಯಲ್ಲಿ ತರಚಿದ ಗಾಯ ಇದ್ದಿರುತ್ತದೆ.

3) ತಲೆಯ ಹಿಂಬದಿಯಲ್ಲಿ ಗುದ್ದಿದ ತಾಜಾ ಸ್ವರೂಪದ ಗಾಯ ಇದ್ದಿರುತ್ತದೆ.

4) ಬಲ ಮುಂಗೈಯಲ್ಲಿ ನೋವು ಇರುತ್ತದೆ.

ಮೇಲೆ ಹೇಳಿದ ಎಲ್ಲಾ ಗಾಯಗಳು ತಾಜಾ ಹಾಗೂ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-17 ಎ ಎಂದು ಗುರುತಿಸಲಾಯಿತು.

ಸದ್ರಿ ಗಾಯಾಳು ದಿ:20-09-2023 ರಂದು 12.00 ಗಂಟೆಗೆ ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುತ್ತಾರೆ. ನಂತರ ಅದೇ ದಿನ ರಾತ್ರಿ 12.30 ಗಂಟೆಗೆ ವೈದ್ಯರ ಸಲಹೆಗೆ ವಿರುದ್ಧವಾಗಿ ಬಿಡುಗಡೆ ಹೊಂದಿರುತ್ತಾರೆ.

ದಿನಾಂಕ:21-09-2023 ರಂದು ಬೆಳಿಗ್ಗೆ 11.25 ಕ್ಕೆ ಪುನಃ ಸದ್ರಿ ಗಾಯಾಳು ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದು 23-09-2023 ರಂದು ಬಿಡುಗಡೆ ಹೊಂದಿರುತ್ತಾರೆ. ಗಾಯಾಳುವಿನ ಕಣ್ಣಿನ ಬಳಿ ಆಗಿರುವ ಗಾಯದ ಬಗ್ಗೆ ಸಿಟಿ ಸ್ಕ್ಯಾನ್ ಮಾಡಲಾಗಿರುತ್ತದೆ. ಸಿಟಿ ಸ್ಕ್ಯಾನ್ ವರದಿಯಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ.

ದಿನಾಂಕ:20-09-2023 ರಾತ್ರಿ 11.50 ಕ್ಕೆ ಸುಕುಮಾರ ಎಂಬ ಗಾಯಾಳು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತಾರೆ. ಅದೇ ದಿನ ರಾತ್ರಿ 8.30 ಗಂಟೆಗೆ 6 ಜನರು ಗುಡ್ಡೆಯಂಗಡಿಯ ಚಂದ್ರಿಕಾ ಬಾರ್ ಬಳಿ ಕೈಯಿಂದ ಹಲ್ಲೆ ಮಾಡಿರುವುದಾಗಿ ಹಲ್ಲೆಯ ಇತಿಹಾಸವನ್ನು ತಿಳಿಸಿರುತ್ತಾರೆ. ಸದ್ರಿ ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಆತನ ದೇಹದ ಮೇಲೆ ಈ ಕೆಳಕಂಡ ಗಾಯ ಕಂಡು ಬಂದವು.

1) ಎದೆಯ ಭಾಗದಲ್ಲಿ ನೋವು ಇರುವುದಾಗಿ ಹೇಳಿರುತ್ತಾನೆ ಮತ್ತು ಯಾವುದೇ ಆತನಿಗೆ ಗಾಯಗಳು ಆದ ಕುರುಹು ಇರುವುದಿಲ್ಲ.

ಮೇಲೆ ಹೇಳಿದ ಗಾಯ ಸಾಮಾನ್ಯ ಸ್ವರೂಪದ್ದಾಗಿದ್ದು, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-18 ಎ ಎಂದು ಗುರುತಿಸಲಾಯಿತು.

ದಿನಾಂಕ:20-09-2023 ರಂದು ರಾತ್ರಿ 11.54 ಗಂಟೆಗೆ ಶ್ರೀಕಾಂತ್ ಎನ್ನುವ ಗಾಯಾಳು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ದಿನಾಂಕ:20-09-2023 ರಂದು ರಾತ್ರಿ 8.30 ಗಂಟೆಗೆ ಗುಡ್ಡೆಯಂಗಡಿಯ ಚಂದ್ರಿಕಾ ಬಾರ್ ಬಳಿ ಹಲ್ಲೆಯಾಗಿರುವುದಾಗಿ ಹಲ್ಲೆಯ ಇತಿಹಾಸವನ್ನು

ತಿಳಿಸಿರುತ್ತಾರೆ. ಸದ್ರಿ ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಆತನ ದೇಹದ ಮೇಲೆ ಈ ಕೆಳಕಂಡ ಗಾಯ ಕಂಡು ಬಂದವು.

1) ಬಲ ಭುಜದಲ್ಲಿ ನೋವು ಎಂದು ತಿಳಿಸಿರುತ್ತಾರೆ. ಮತ್ತು ಆತನ ದೇಹದ ಮೇಲೆ ಯಾವುದೇ ಗಾಯ ಕಂಡು ಬಂರುವುದಿಲ್ಲ.

ಮೇಲೆ ಹೇಳಿದ ಗಾಯ ಸಾಮಾನ್ಯ ಸ್ವರೂಪದ್ದಾಗಿದ್ದು, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-19 ಎ ಎಂದು ಗುರುತಿಸಲಾಯಿತು.

ನಿಪಿ-17 ರಲ್ಲಿ ನಮೂದಿಸಿದ 1 ನೇ ಗಾಯವು ದೊಣ್ಣೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ. 2 ರಿಂದ 4 ನೇ ಗಾಯಗಳು ಒಬ್ಬ ವ್ಯಕ್ತಿಗೆ ಕೈಗಳಿಂದ ಹಲ್ಲೆ ಮಾಡಿ ಕಾಂಕ್ರೀಟ್ ನೆಲದ ಮೇಲೆ ದೂಡಿದರೆ ಆಗುವ ಸಾಧ್ಯತೆ ಇರುತ್ತದೆ.

ನಿಪಿ-18 ರಲ್ಲಿರುವ ಗಾಯವು ಒಬ್ಬ ವ್ಯಕ್ತಿಗೆ ಕೈಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ. ಹಾಗೂ ನಿಪಿ-19 ರಲ್ಲಿ ನಮೂದಿಸಿದ ಗಾಯವು ಒಬ್ಬ ವ್ಯಕ್ತಿಗೆ ಕೈಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ.

<u>ಪಾಟೀ ಸವಾಲು:</u> <u>1 ರಿಂದ 7 ನೇ ಆರೋಪಿ ಪರ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ</u>

ನಿಪಿ-17, 18 ಮತ್ತು ನಿಪಿ-19 ರಲ್ಲಿ ನಾನು ಚಿಕಿತ್ಸೆ ನೀಡಿದ ಗಾಯಾಳುಗಳು ಮದ್ಯಪಾನ ಮಾಡಿದ್ದು ಕಂಡು ಬಂದಿದ್ದು, ಅದನ್ನು ನಾನು ಪ್ರಮಾಣ ಪತ್ರದಲ್ಲಿ ಕಾಣಿಸಿದ್ದೇನೆ. ಗಾಯದ ಪ್ರಮಾಣ ಪತ್ರ ನೀಡುವ ಪೂರ್ವದಲ್ಲಿ ಮತ್ತು ಗಾಯದ ಪ್ರಮಾಣ ಪತ್ರ ನೀಡಿದ ನಂತರ ಪೋಲೀಸರು ನನ್ನ ಮುಂದೆ ಯಾವುದೇ ವಸ್ತುಗಳನ್ನು ಹಾಜರುಪಡಿಸಿ ನನ್ನ ಅಭಿಪ್ರಾಯ ಪಡೆದುಕೊಂಡಿಲ್ಲ. ಮದ್ಯಪಾನ ಸೇವಿಸಿದ ವ್ಯಕ್ತಿಗಳು ಆಯ ತಪ್ಪಿ ರಸ್ತೆ ಮೇಲೆ ಬಿದ್ದಲ್ಲಿ ನಿಪಿ-17 ನಿಪಿ-18 ಮತ್ತು ನಿಪಿ-19 ರಲ್ಲಿ ಕಂಡು ಬರುವ ಗಾಯಗಳು ಆ ವ್ಯಕ್ತಿಗಳಿಗೆ ಆಗುವ ಸಾಧ್ಯತೆ ಇರುತ್ತದೆ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**